**SC No. 205/2022**
**DW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂಃ **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಫಿಯಾನ ಗೊರನವನಕೊಳ್ಳ | ಡಿ ಡಬ್ಲ್ಯೂ : 1 |
| ತಂದೆಯ ಹೆಸರು | : | ಮೆಹಬೂಬಸಾಬ್ ಗೊರವನಕೊಳ್ಳ | |
| ಪ್ರಾಯ | : | 14 ವರ್ಷ | ದಿನಾಂಕ 02.03.2026 ರಂದು ಸಾಕ್ಷಿಯ ಹೇಳಿಕೆಯನ್ನು ದಾಖಲು ಮಾಡಲಾಯಿತು. |
| ಉದ್ಯೋಗ | : | ವಿದ್ಯಾರ್ಥಿ, ಎಂಟನೇ ತರಗತಿ | |
| ವಾಸಸ್ಥಳ | : | ಮುನವಳ್ಳಿ, ತಾಃ ಸವದತ್ತಿ | |

**ಸಾಕ್ಷಿಯು ಅಪ್ರಾಪ್ತ ವಯಸ್ಕನಾಗಿರುವ ಕಾರಣ ಆತನ ಸಾಕ್ಷಿ ಹೇಳುವ ಸಾಮರ್ಥ್ಯದ ಕುರಿತು ಈ ಕೆಳಕಂಡ ಹೇಳಿಕೆಗಳನ್ನು ದಾಖಲು ಮಾಡಲಾಗಿದೆ.**

ಪ್ರಶ್ನೆಃ 1. ಈ ದಿನ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಬಂದಿರುವಿರಿ?

ಉತ್ತರಃ ನನ್ನ ತಂದೆಯ ವಿರುದ್ಧ ದಾಖಲಾಗಿರುವ ಕೇಸನ ಬಗ್ಗೆ.

ಪ್ರಶ್ನೆಃ 2.ನಿಮ್ಮನ್ನು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರಬೇಕು ಎಂದು ಯಾರು ಕರೆದಿದ್ದು ?

ಉತ್ತರಃ ನನ್ನ ತಂದೆಯ ಪರವಾಗಿ ಹಾಜರಾಗಿರುವ ವಕೀಲರು.

ಪ್ರಶ್ನೆಃ3. ನಮ್ಮ ತಂದೆ ಈಗ ಎಲ್ಲಿ ಇರುತ್ತಾರೆ?

ಉತ್ತರಃ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ.

ಪ್ರಶ್ನೆಃ 4. ನೀನು ಈಗ ಯಾರ ಜೊತೆ ವಾಸ ಮಾಡಿಕೊಂಡಿದ್ದಿ?

ಉತ್ತರಃ ನಾನು ನನ್ನ ಅಜ್ಜಿಯ ಜೊತೆ ಮುನವಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದೇನೆ.

ಪ್ರಶ್ನೆಃ 5. ಈ ದಿನ ನ್ಯಾಯಾಲಯಕ್ಕೆ ನೀವು ಯಾರ ಜೊತೆ ಬಂದಿದ್ದೀರಿ?

ಉತ್ತರಃ ನನ್ನ ಅಜ್ಜಿಯ ಜೊತೆ.

ಪ್ರಶ್ನೆಃ 6. ನಿಮಗೆ ನ್ಯಾಯಾಲಯದಲ್ಲಿ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಯಾರಾದರೂ ಹೇಳಿ ಕೊಟ್ಟಿದ್ದಾರಾ?

ಉತ್ತರಃ ಇಲ್ಲ.

ಪ್ರಶ್ನೆಃ7. ನಿಮ್ಮ ತಂದೆಯ ವಿರುದ್ಧ ದಾಖಲಾಗಿರುವ ಕೇಸನ ಬಗ್ಗೆ ಮಾಹಿತಿ ಇದೆಯೇ?

ಉತ್ತರಃ ಹೌದು, ನನ್ನ ತಂದೆಯ ಮೇಲೆ ಕೊಲೆ ಮಾಡಿರುವ ಆಪಾದನೆ ಮಾಡಿದ್ದಾರೆ.

(ಈ ಮೇಲಿನ ಹೇಳಿಕೆಗಳಿಂದ ಸಾಕ್ಷಿಯು ಅಪ್ರಾಪ್ತ ವಯಸ್ಕನಿದ್ದರೂ ಕೂಡಾ ಈ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಲು ಸಮರ್ಥನಿರುತ್ತಾನೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಿರುವ ಕಾರಣ ಆತನ ಸಾಕ್ಷಿ ಹೇಳಿಕೆಯನ್ನು ದಾಖಲು ಮಾಡಲು ಪರವಾನಿಗೆ ನೀಡಲಾಗಿದೆ).

**ಮುಖ್ಯವಿಚಾರಣೆಃ ಶ್ರೀ ಪಿ ಜೆ ಜಿ ವಕೀಲರಿಂದಃ ಆರೋಪಿ ಪರವಾಗಿಃ**

ನನ್ನ ತಂದೆ ಮತ್ತು ನನ್ನ ತಾಯಿಯ ನಡುವಿನ ಸಂಬಂಧ ಮೊದಲು ಚೆನ್ನಾಗಿಯೇ ಇತ್ತು. ಆ ಬಳಿಕ ನಮ್ಮ ಮನೆಗೆ ಒಬ್ಬ ಗಂಡಸ ಬರುತ್ತಿದ್ದರು. ಆ ಕಾಲಕ್ಕೆ ನನ್ನ ತಾಯಿ ನನ್ನನ್ನು ಮನೆಯಿಂದ ಹೊರಗೆ ಕಳುಹಿಸಿ, ಮನೆಯ ಬಾಗಿಲು ಹಾಕಿ ಗಂಡಸಿನೊಂದಿಗೆ ಇರುತ್ತಿದ್ದರು. ಈ ರೀತಿ ನಮ್ಮ ಮನೆಗೆ ಬರುತ್ತಿದ್ದ ಗಂಡಸಿನ ಹೆಸರು ಹುಸೇನ ಮುಲ್ಲಾ ಎಂಬುದಾಗಿದೆ.

2. ಮೊದಲು ನಾವು ಸವದತ್ತಿಯಲ್ಲಿ ವಾಸ ಮಾಡಿಕೊಂಡಿದ್ದು, ಈ ಮೇಲಿನ ಘಟನೆ ನಡೆದ ನಂತರ ನನ್ನ ತಂದೆ ನಮ್ಮನ್ನು ಮುನವಳ್ಳಿಗೆ ಕರೆತಂದು ಅಲ್ಲಿ ನಾವು ವಾಸ ಮಾಡಲು ಪ್ರಾರಂಭಿಸಿದ್ದೆವು. ನಾವು ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದಾಗ ಕೂಡಾ ಈ ಮೇಲೆ ಹೇಳಿದ ಹುಸೇನ ನಮ್ಮ ಮನೆಗೆ ಬರುತ್ತಿದ್ದನು. ಇದನ್ನು ಗಮನಿಸಿದ ನನ್ನ ತಂದೆ ನನ್ನ ತಾಯಿಗೆ ತಲ್ಲಾಕ್ ಕೊಟ್ಟಿದ್ದರು. ಈ ಪ್ರಕರಣದ ಘಟನೆಯಾಗಿದೆ ಎಂದು ಹೇಳುವ ದಿನ ನನ್ನ ತಂದೆ ಮತ್ತು ನಾನು ಮುನವಳ್ಳಿಯಲ್ಲಿದ್ದೆವು. ನನ್ನ ತಾಯಿಯ ಸಾವಿಗೂ ನನ್ನ ತಂದೆಗೂ ಯಾವುದೇ ಸಂಬಂಧ ಇರುವುದಿಲ್ಲ.

ಪಾಟೀ ಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ

3. ನನ್ನ ತಂದೆಗೆ ನಾವು ಇಬ್ಬರೂ ಮಕ್ಕಳು. ನನ್ನ ತಂಗಿಯ ಹೆಸರು ಆಲಿಯಾ ಎಂಬುದಾಗಿದೆ. ನಾನು ಈಗ ಮುನವಳ್ಳಿಯ ಎಸ್ ಪಿ ಜೆ ಜೆ ಹೈಸ್ಕೂಲ್‌ನಲ್ಲಿ ಎಂಟನೇ ತರಗತಿ ಓದುತ್ತಿದ್ದೇನೆ. ನನ್ನ ತಂಗಿ ಆಲಿಯಾ ಎಲ್ಲಿ ಓದುತ್ತಿದ್ದಾಳೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ತಂದೆಯ ಹೆಸರು ಇಸ್ಮಾಯಿಲ್ ಬೀಡಿ ಎಂಬುದಾಗಿದೆ. ಸುಬಾನಿ ಬೀಡಿ ನನ್ನ ಮಾವ.

4. ನನ್ನ ತಾಯಿಯ ಕೊಲೆಯಾಗುವ ಮೊದಲು ನನ್ನ ಅಜ್ಜ ನಮ್ಮ ಮನೆಗೆ ಮಾತುಕತೆ ಮಾಡುವ ಸಲುವಾಗಿ ಬಂದಿರಲಿಲ್ಲ. ನನ್ನ ತಂದೆ ಮತ್ತು ತಾಯಿಯ ನಡುವೆ ನಮ್ಮ ಮನೆಯಲ್ಲಿ ಆಗಾಗ ಜಗಳ ನಡೆಯುತ್ತಿತ್ತು ಎನ್ನುವುದು ನಿಜವಲ್ಲ. ನನ್ನ ತಾಯಿಯ ಕೊಲೆ ಆದ ತಾರೀಖು ನನಗೆ ಗೊತ್ತಿಲ್ಲ. ನನ್ನ ತಾಯಿಯ ಕೊಲೆ ಸವದತ್ತಿಯಲ್ಲಿ ಆಗಿತ್ತು ಎಂದು ನನಗೆ ನಂತರ ತಿಳಿಯಿತು. ಈ ಕೊಲೆಯಾದ ನಂತರ ನಾನು ಪೋಲಿಸರ ಬಳಿ ಹೋಗಿ ನನ್ನ ತಂದೆ ಮುನವಳ್ಳಿಯಲ್ಲಿಯೇ ಇದ್ದರು ಮತ್ತು ಸವದತ್ತಿಗೆ ಹೋಗಿರಲಿಲ್ಲ ಎಂದು ನಾನು ಹೇಳಿಕೆ ಕೊಟ್ಟಿಲ್ಲ.

5. ನಾನು ಈ ದಿನ ನನ್ನ ಅಜ್ಜಿಯ ಜೊತೆ ನ್ಯಾಯಾಲಯಕ್ಕೆ ಬರುವಾಗ ನನ್ನ ಅಜ್ಜಿ ನನಗೆ ಏನು ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟಿದ್ದರು ಎನ್ನುವುದು ನಿಜವಲ್ಲ. ನನ್ನ ತಾಯಿಯ ಕೊಲೆಯಾದ ದಿನ ಮುಂಜಾನೆಯಿಂದಲೇ ನನ್ನ ತಂದೆ ಮುನವಳ್ಳಿಯಲ್ಲಿಯೇ ಇದ್ದರು. ನನ್ನ ತಂದೆ ಮುಂಜಾನೆ ಎಷ್ಟು ಗಂಟೆಯಿಂದ ಮುನವಳ್ಳಿಯಲ್ಲಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ತಂದೆಯನ್ನು ಪೋಲಿಸರು ಬಂಧಿಸಿದ ನಂತರ ನನಗೆ ಪೋಲಿಸ ಠಾಣೆಗೆ ಹೋಗಿ ನನ್ನ ತಾಯಿಯ ಕೊಲೆಯಾಗುವ ಕಾಲಕ್ಕೆ ನನ್ನ ತಂದೆ ಮುನವಳ್ಳಿಯಲ್ಲಿಯೇ ಇದ್ದರು ಮತ್ತು ಅವರು ಆ ಕೊಲೆ ಮಾಡಿಲ್ಲ ಎಂದು ಹೇಳಲು ಯಾವುದೇ ತೊಂದರೆ ಇರಲಿಲ್ಲ.

6. ನನ್ನ ತಾಯಿ ಸವದತ್ತಿಯಲ್ಲಿ ನನ್ನ ತಂಗಿ ಆಲಿಯಾಳ ಜೊತೆಯಲ್ಲಿ ಇರುತ್ತಿದ್ದರು ಎನ್ನುವುದು ನಿಜ. ನಾನು, ನನ್ನ ತಂದೆ ಮತ್ತು ನನ್ನ ಅಜ್ಜಿ ಮುನವಳ್ಳಿಯಲ್ಲಿ ಇರುತ್ತಿದ್ದೆವು. ಹುಸೇನ ಎನ್ನುವವನು ನಮ್ಮ ಮನೆಗೆ ಬರುತ್ತಿದ್ದ ಎನ್ನುವ ವಿಚಾರ ನನ್ನ ತಂದೆಗೆ ಆನಂತರ ತಿಳಿದು ಬಂತು. ಈ ರೀತಿ ತಿಳಿದು ಬಂದ ನಂತರ ನನ್ನ ತಂದೆ ಮತ್ತು ತಾಯಿಯ ನಡುವೆ ಜಗಳ ನಡೆಯುತ್ತಿತ್ತು ಎನ್ನುವುದು ನಿಜವಲ್ಲ. ನಿಮ್ಮ ತಾಯಿ ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಆಕೆ ಮನೆಯಲ್ಲಿಯೇ ಇರುತ್ತಿದ್ದರು ಎನ್ನುತ್ತಾರೆ. ನನ್ನ ತಾಯಿ ಕೊಲೆಯಾಗುವ ಮೊದಲು ಹೊರಗಡೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

7. ನನ್ನ ತಾಯಿಯ ಕೊಲೆಯಾಗುವ ಕಾಲಕ್ಕೆ ನಾನು ಮುನವಳ್ಳಿಯಲ್ಲಿದ್ದ ಕಾರಣ ಆಕೆಯ ಕೊಲೆ ಹೇಗೆ ಆಯಿತು ಮತ್ತು ಅದಕ್ಕೆ ಯಾರು ಕಾರಣ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಹುಸೇನ ಎನ್ನುವವನ ಜೊತೆ ಅನೈತಿಕ ಸಂಬಂಧ ಇರುವ ಬಗ್ಗೆ ನನ್ನ ತಂದೆ ಮತ್ತು ತಾಯಿಯ ನಡುವೆ ಆಗಾಗ ನಮ್ಮ ಮನೆಯಲ್ಲಿ ಜಗಳವಾಗುತ್ತಿತ್ತು ಮತ್ತು ಆ

ಕಾರಣಕ್ಕಾಗಿ ನನ್ನ ತಂದೆಗೆ ನನ್ನ ತಾಯಿಯ ಮೇಲೆ ದ್ವೇಷ ಇತ್ತು ಎನ್ನುವುದು ನಿಜವಲ್ಲ. ನನ್ನ ತಂದೆ-ತಾಯಿಯ ನಡುವವಿನ ಜಗಳವನ್ನು ಬಗೆಹರಿಸಿ ಮಾತುಕತೆ ಮಾಡಲು ನನ್ನ ಅಜ್ಜ ಅವರ ಊರ ಜನರೊಂದಿಗೆ ಸವದತ್ತಿ ಮತ್ತು ಮುನವಳ್ಳಿಯಲ್ಲಿರುವ ನಮ್ಮ ಮನೆಗೆ ಬಂದಿದ್ದರು ಎನ್ನುವುದು ನಿಜವಲ್ಲ. ಆನಂತರ ನನ್ನ ತಂದೆ ಇದೇ ಕಾರಣಕ್ಕಾಗಿ ನನ್ನ ತಾಯಿಯನ್ನು ಕೊಲೆ ಮಾಡಿರುವ ವಿಚಾರ ಗೊತ್ತಾಗಿತ್ತು ಎನ್ನುವುದು ನಿಜವಲ್ಲ. ಕೊಲೆಯಾದ ಮನೆಯಲ್ಲಿ ನನ್ನ ತಾಯಿ ಮತ್ತು ನನ್ನ ತಂಗಿ ಆಲಿಯಾ ಇಬ್ಬರೇ ಇರುತ್ತಿದ್ದರು ಎನ್ನುವುದು ನಿಜ. ನನ್ನ ತಾಯಿಯ ಕೊಲೆಯನ್ನು ನನ್ನ ತಂದೆಯೇ ಮಾಡಿದ್ದರು ಎಂದು ನನಗೆ ಗೊತ್ತಿದ್ದರೂ ಕೂಡಾ ನನ್ನ ತಂದೆಯನ್ನು ಶಿಕ್ಷೆಯಿಂದ ಪಾರು ಮಾಡಲು ನಾನು ನನ್ನ ತಾಯಿ ಕೊಲೆಯಾದ ದಿನ ನನ್ನ ತಂದೆ ಮುನವಳ್ಳಿಯಲ್ಲಿಯೇ ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.